**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.1/2022**

**PW. 1**

**CW. 2**

**ಸಾಕ್ಷಿಯ ಹೆಸರು** –**ಗಿರೀಶ ಆರ್ ವಿ**

**ತಂದೆಯ ಹೆಸರು** –**ರಾಮಣ್ಣ ವಿ ಸಿ**

**ವಯಸ್ಸು** –41 **ವರ್ಷಗಳು** ದಿನಾಂಕ 25–02–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ** –**ಗಣಿ ಮತ್ತು ಭೂ ವಿಜ್ಞಾನಿ ಇಲಾಖೆ , ಮೈಸೂರು**

**ವಾಸಸ್ಥಳ** –**ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2019 ರಿಂದ ಇಲ್ಲಿಯವರೆಗೂ ಗಣಿ ಮತ್ತು ಭೂ ವಿಜ್ಞಾನಿ ಇಲಾಖೆಯಲ್ಲಿ ಜಿಯಾಲಾಜಿಸ್ಟ ಆಗಿ ಸೇವೆ ಸಲ್ಲಿಸುತ್ತಿದ್ದೇನೆ.

ಚಾಸಾ–1 ರವರು 2019 ನೇ ಸಾಲಿನಲ್ಲಿ ನನ್ನೊಂದಿಗೆ ಜಿಯಾಲಾಜಿಸ್ಟ ಆಗಿ ಸೇವೆ ಸಲ್ಲಿಸುತ್ತಿದ್ದರು. ಚಾಸಾ–3 ರವರು ನಮ್ಮ ಇಲಾಖಾ ವಾಹನ ಚಾಲಕರು. ದಿಃ 29–06–2019 ರಂದು ಚಾಸಾ–1 ರವರು ಬೆಳಗ್ಗೆ 11.00 ಗಂಟೆ ಸಮಾರಿಗೆ ನನ್ನ ಬಳಿ ಬಂದು , ಪಿರಿಯಾಪಟ್ಟಣ ತಾಃ ಮೂತಗೂರು ಗ್ರಾಮದ ಸ ನಂ 7 ರ ಜಮೀನಿನಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದೇ ಎಂದು ದೂರವಾಣಿ ಮೂಲಕ ಮಾಹಿತಿ ಬಂದಿದೆ ಎಂದು ಹೇಳಿದರು. ಆಗ ಸ್ಥಳ ಪರಿಶೀಲನೆಗಾಗಿ ಚಾಸಾ–1 ರವರು ನನ್ನನ್ನು ಕರೆದುಕೊಂಡು ನಮ್ಮ ಇಲಾಖಾ ವಾಹನದಲ್ಲಿ ಮಧ್ಯಾಹ್ನ 3.00 ಗಂಟೆ ಸುಮಾರಿಗೆ ಪಿರಿಯಾಪಟ್ಟಣ ತಾಃ ಮೂತಗೂರು ಗ್ರಾಮದ ಸ ನಂ 7 ರ ಜಮೀನಿಗೆ ಹೋಗಿ ನೋಡಲಾಗಿ , ಕೆಲವು ವ್ಯಕ್ತಿಗಳು ಕಲ್ಲು ಗಣಿಗಾರಿಗೆ ಮಾಡುತ್ತಿದ್ದು , ನಮ್ಮ ವಾಹನವನ್ನು ನೋಡಿ

ಸ್ಥಳದಿಂದ ಪರಾರಿಯಾದರು. ಅಕ್ಕಪಕ್ಕದ ಜಮೀನಿನ ಮಾಲೀಕರನ್ನು ವಿಚಾರಿಸಲಾಗಿ , ಸದರಿ ಜಮೀನು ಸುಬ್ರಮಣ್ಯ ಬಿನ್ ನಾರಾಯಣ ಮತ್ತು ಪುರುಷೋತ್ತಮ ಎನ್ನುವವರಿಗೆ ಸೇರಿದ್ದು ಎಂದು ಹೇಳಿದರು. ಸದರಿ ಜಮೀನಿನಲ್ಲಿ ಮರಡಿಯೂರು ಗ್ರಾಮದ ಶಶಿಧರನ್ @ ಶಶಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆ ಎಂದು ಹೇಳಿದರು. ನಾವು ಸ್ಥಳ ಪರಿಶೀಲನೆ ಮಾಡಲಾಗಿ , ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುವುದು ಕಂಡುಬಂತು. ಸದರಿ ಸ್ಥಳದಲ್ಲಿ ಸ್ಫೋಟಕ ವಸ್ತುಗಳು ಕಂಡುಬಂದವು. ಅವುಗಳನ್ನು ಪರೀಕ್ಷಿಸಲಾಗಿ ಮೂರು ವಿದಧ ಸ್ಫೋಟಕ ವಸ್ತುಗಳಾಗಿದ್ದವು. ಅವುಗಳೆಂದರೆ, 1. Exposive Sun 90,(15 paste tubes)

2. Detonator wires (3)

3. Detonator caps(14) ಗಳಾಗಿದ್ದವು. ಸದರಿ ವಸ್ತುಗಳನ್ನು ಕಲ್ಲು ಬಂಡೆಗಳನ್ನು ಸ್ಫೋಟ ಮಾಡಲು ಉಪಯೋಗಿಸುತ್ತಾರೆ. ಸದರಿ ಸ್ಫೋಟಕ ವಸ್ತುಗಳನ್ನು ಉಪಯೋಗಿಸಲು ತಜ್ಞ ಆಗಿರಬೇಕು , ಇಲ್ಲವಾದರೆ ಸ್ಫೋಟವಾಗಿ ಜೀವಹಾನಿ ಆಗುವ ಸಂಭವವಿರುತ್ತದೆ.

ಸದರಿ ವಸ್ತುಗಳನ್ನು ವಶಕ್ಕೆ ಪಡೆದು, ಬೈಲುಕುಪ್ಪೆ ಪೊಲೀಸ್ ಠಾಣೆಗೆ ಹೋಗಿ ಚಾಸಾ-1 ರವರು ದೂರು ನೀಡಿದರು. ಮೇಲೆ ಹೇಳಿದ ಸ.ನಂ 7 ರಲ್ಲಿ ಕಲ್ಲು ಗಣಿಗಾರಿಕೆ ಮಾಡಲು ನಮ್ಮ ಇಲಾಖೆಯಿಂದ ಯಾವುದೇ ಪರವಾನಿಗೆ ಪಡೆದಿರಲಿಲ್ಲ. ಮೇಲೆ ಹೇಳಿದ ಮೂರು ವಸ್ತುಗಳನ್ನು ಸಾಕ್ಷಿಯು ಫೋಟೋದಲ್ಲಿ ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ-1 ಎಂದು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

**SC No.1/2022**
**PW.1**

**ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ-**

ನಾನು ಮತ್ತು ಚಾಸಾ-1 ರವರು ಮೇಲೆ ಹೇಳಿದ ಸ ನಂ 7 ರ ಜಮೀನಿಗೆ ಭೇಟಿ ನೀಡಿ ಪರಿಶೀಲಿಸಿದ ಬಗ್ಗೆ ನಮ್ಮ ಇಲಾಖೆಯ ವಹಿಯಲ್ಲಿ ನಮೂದು ಮಾಡಲಾಗಿದೆ. ಸದರಿ ವಹಿಯನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ. ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋದಾಗ ಸುಮಾರು 7-8 ಜನರು ಓಡಿ ಹೋದರು. ಓಡಿ ಹೋದ ಜನರ ಬಗ್ಗೆ ಮಾಹಿತಿ ಪಡೆದಿಲ್ಲ ಎಂದರೆ ಸರಿ. ಅಕ್ಕಪಕ್ಕದ ಜಮೀನಿನ ಮಾಲೀಕರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿರುವ ವಸ್ತುಗಳನ್ನು ಸ್ಥಳದಲ್ಲಿ ವಶಪಡಿಸಿಕೊಂಡ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವ ಸ್ಫೋಟಕ ವಸ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಜೊತೆ ಸದರಿ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.